† Sri S. NIJALINGAPPA.—Rs. 111.69 lakhs.

Sri M. C. BASAPPA.—Is it not a fact that projects costing less than Rs. 2 crores need not go to the C.W.P.C. for clearance or sanction ?

Sri S. NIJALINGAPPA.—Projects costing more than Rs. 1 crore will have to be sent to them.

Sri M. C. BASAPPA.—Is it not a fact that there is a sub-division called the Suvarnavathy Sub-Division at Chamarajnagar ?

Sri S. NIJALINGAPPA.—I want notice.

Sri M. C. BASAPPA.—Though Rs. 1,50,000 has been allotted for 1965-66, what was the difficulty in spending that amount in that sub-division ?

Sri S. NIJALINGAPPA.—Preliminary work has been taken up and the answer also states that the main project estimate has not been sanctioned.

Sri M. C. BASAPPA.—Is it not a fact that the tanks situated lower down this project will have assured water supply if this project is taken up ?

Sri S. NIJALINGAPPA.—This is a new question and I want notice.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಿಬ್ಬಂದಿಗಾಗಿ ಏನೂ ಖರ್ಚು ಮಾಡಿಲ್ಲ ಎಂದು ಹೇಳಿದ್ದಾರೆ. ಆದರೆ ಈ ಕೆಲಸಕ್ಕೆ ಒದಗಿಸಿರುವ 1,65,000 ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಏನಾದರೂ ಸಿಬ್ಬಂದಿ ಇರಬೇಡವೇ ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಏನು ಸಿಬ್ಬಂದಿ ಇದೆಯೋ ಅದರಿಂದಲೇ ನಮ್ಮ ಕೆಲಸವನ್ನು ಮಾಡಿಸುತ್ತಿದ್ದೇವೆ.

Sri M. C. BASAPPA.—In view of the scarcity conditions existing there and the urgency of the work, will the Government take up this work immediately.

Sri S. NIJALINGAPPA.—It is a suggestion for action and I will certainly have it looked into.

Copper wire drawing Factories.

*Q.—49. Sri S. P. PHAYDE (Ankola).—

Will the Government be pleased to state :—

(*a*) the number of copper wire drawing factories in Mysore State and name of each factory ;

(*b*) the basis of supplying copper to these factories ;

(*c*) whether there is any disparity in supply of copper to these factories and if so, reasons for the same ;

(*d*) the details of supply of copper to these factories during the month of April and September 1964 ?

---

†Indicates that the remarks or speeches have not been revised by the member concerned

A.—Sri K. MALLAPPA (Minister for Industries and Commerce).—

(*a*) 8.

(*b*) On the basis of assessment and classification of the units with reference to their capacities.

(*c*) Yes. The assessment of capacities of all nonferrous metal consuming units were carried out by the Department and the units have been classified with reference to their capacities. The allocations were made according to their capacities during April-September 1963. In cases where the previous allotments were found more, it has been decided that suitable reduction be made progressively lest it should adversely affect the working of the industry.

		Mts.
(*d*) 1.	Mysore Wire and Metal Industries, Bangalore...	61
2.	Vardhaman Metal Wire Works, Hubli ...	32
3.	State Electrical Industries, Ramanagaram ...	3
4.	Mahaveer Casting and Rolling Mills, Bangalore.	4
5.	Vasudeva Power Rolling Mill, Bangalore ...	4
6.	Popular Cotton Covering Works, Belgaum ...	4
7.	Bhati Steel Industries, Belgaum. ...	2
8.	Venkateswara power Roling Mills, Bangalore...	5

ಶ್ರೀ ಎಸ್. ಪಿ. ಛಾಯದೆ.—ತಾಮ್ರದ ಕೋಟಾ ಹಂಚಿಕೆ ಮಾಡಿರುವುದನ್ನು ನೋಡಿದರೆ ಹುಬ್ಬಳ್ಳಿಯಲ್ಲಿನ ಕಾರ್ಖಾನೆಗಳಿಗೆ ಕಡಮೆ ಕೊಟ್ಟಿರುವಂತೆ ಕಾಣುತ್ತದೆ. ಇದಕ್ಕೆ ಕಾರಣ ವೇನು ?

†ಶ್ರೀ ಕೆ. ಮಲ್ಲಪ್ಪ.—ಕಾರ್ಖಾನೆಗೆ ಹಾಕಿರುವ ಬಂಡವಾಳ, ಅದರಲ್ಲಿರುವ ಯಂತ್ರೋಪಕರಣಗಳು ಇವನ್ನೆಲ್ಲ ನೋಡಿಕೊಂಡು ಕೋಟಾ ನಿಗದಿ ಮಾಡಲಾಗುತ್ತದೆ.

ಶ್ರೀ ಎಸ್. ಪಿ. ಛಾಯದೆ.—ಅವರಿಗೆ ಕೊಡ ವ ಕೋಟಾ ಏನೂ ಸಾಲದು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದುಂಟೆ, ಸ್ವಾಮಿ ?

ಶ್ರೀ ಕೆ. ಮಲ್ಲಪ್ಪ.—ಈಗ ಸಿಕ್ಕುತ್ತ ಇರುವುದು ಸಾಲದು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ಹೆಚ್ಚಿಸಬೇಕೆಂದು ಇಂಡಿಯಾ ಸರ್ಕಾರವನ್ನು ಕೇಳಿದ್ದೇವೆ. ತಾಮ್ರ, ಜಿಂಕ್ ಮತ್ತು ಸೀಸ ಸಾಕಷ್ಟು ಪ್ರಮಾಣದಲ್ಲಿ ಇಂಡಿಯಾ ಸರ್ಕಾರದವರಿಗೇ ಸಿಕ್ಕುತ್ತಿಲ್ಲ, ಅದರಿಂದಾಗಿ ನಮಗೂ ಕೂಡ ಬೇಕಾದಷ್ಟು ಸಿಕ್ಕುತ್ತಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ರಾಜ್ಯಕ್ಕೆ ಬರುತ್ತಿರುವ ಕೋಟಾ ಎಷ್ಟು ಮತ್ತು ಇನ್ನು ಎಷ್ಟು ಬೇಕಾಗಿದೆ ಎಂದು ಸರ್ಕಾರ ಕೇಳಿದೆ ?

ಶ್ರೀ ಕೆ. ಮಲ್ಲಪ್ಪ.—ರಾಜ್ಯಕ್ಕೆ ಬಂದಿರುವುದು ಸೆಪ್ಟೆಂಬರ್ 1964ರವರೆಗೆ 410 ಟನ್. ಅಲ್ಲಿಂದ ಈಚೆಗೆ ಏನೂ ಕೊಟ್ಟಿಲ್ಲ. ತಾಮ್ರವನ್ನೆಲ್ಲ ರಾಷ್ಟ್ರ ರಕ್ಷಣಾ ಕಾರ್ಯಗಳಿಗೆ ಉಪಯೋಗಿಸುತ್ತಿರುವುದರಿಂದ ಈಗ ಏನೂ ಕೊಡುತ್ತಿಲ್ಲ.

Sri K. P. GADAG.—When were these allotments made ?

ಶ್ರೀ ಕೆ. ಮಲ್ಲಪ್ಪ.—ಇಲ್ಲಿ ಕೊಟ್ಟಿರುವುದು 1963ರಲ್ಲಿ ಹಂಚಿಕೆ ಮಾಡಿದಂಥದ್ದು.

Sri K. P. GADAG.—May I know whether later on any new comers have been allotted or whether any of them have put in their applications for copper ?

Sri K. MALLAPPA.—From the beginning of 1965, no distribution has been made and no industry depending upon scarce raw materials will be registered. That has been made clear to the public.

ಶ್ರೀ ಸಿದ್ದಯ್ಯ ಕಾಶಿಮಠ್.—ತಾಮ್ರದ ಕೋಟಾ ಕೊಟ್ಟನಂತರ ಆದರಿಂದ ತಾಮ್ರದ ತಂತಿಯನ್ನು ತಯಾರಿಸಿದ್ದಾರೆಯೇ ಎನ್ನುವುದಕ್ಕೆ ನರ್ವೆ ಏನಾದರೂ ಮಾಡಿದ್ದಾರೆಯೇ ?

ಶ್ರೀ ಕೆ. ಮಲ್ಲಪ್ಪ.—ಮಾಡಿದ್ದೇವೆ. ತಾಮ್ರದ ತಂತಿಯನ್ನು ಮಾಡುವವರು ಕೆಲವು ಸರ್ಕಾರಿ ಕಂಪೆನಿಗಳಿಗೆ, REMCO ಮೊದಲಾದ ಕಂಪೆನಿಗಳಿಗೆ ಕೊಡುತ್ತಾರೆ. ಹಾಗೆ ಚೆಕ್ ಮಾಡುವ ಅಧಾರದ ಮೇಲೆಯೇ ಮುಂದಿನ ಕೋಟಾ ಕೊಡುವುದು.

ಶ್ರೀ ಜಿ. ಎನ್. ಪಾಟೀರ್.—ತಾಮ್ರವನ್ನು ಹಂಚುವಾಗ ಆ ಕಾರ್ಖಾನೆಗಳಿಗೆ ಕೆಪಾಸಿಟಿ ಇದೆ ಎಂದು ಹೇಗೆ ಹೇಳುತ್ತೀರಿ ?

ಶ್ರೀ ಕೆ. ಮಲ್ಲಪ್ಪ.—ನರ್ವೆ ಮಾತಿ, ಪ್ರತಿಯೊಂದರಲ್ಲಿ ಎಷ್ಟು ಬಂಡವಾಳವನ್ನು ಹಾಕಿದ್ದಾರೆ, ಎಷ್ಟು ಯಂತ್ರಗಳಿವೆ, ಎಷ್ಟು ಜನ ಕೆಲಸಗಾರರು ಕೆಲಸ ಮಾಡುತ್ತಾರೆ, ಎನ್ನುವ ವಿವರಗಳನ್ನೆಲ್ಲ ನಂಗ್ರುಹಿಸಿ ಕೈಗಾರಿಕಾ ಶಾಖೆಯ ಡೈರೆಕ್ಟರವರಿಗೆ ಕಳಿಸಿ ಕೊಡುತ್ತಾರೆ. ಆ ಮಾಹಿತಿಯ ಆಧಾರದ ಮೇಲೆ ಕೋಟಾ ಅಲಾಟ್ ಮಾಡುತ್ತಾರೆ.

ಶ್ರೀ ಬಿ. ಎಂ. ಪಾಟೀರ್.—ಇವುಗಳಲ್ಲಿ ಯಾವುದಾದರೂ ಕಾರ್ಖಾನೆಗಳು ಅವರಿಗೆ ಕೊಟ್ಟ ಕೋಟಾ ನರಿಯಾಗಿ ಉಪಯೋಗ ಮಾಡುತ್ತಿಲ್ಲ ಎಂದು ಸರ್ಕಾರಕ್ಕೆ ತಿಳಿದು ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಎಂಟು ಕಂಪೆನಿಗಳೂ ನರಿಯಾಗಿ ಉಪಯೋಗ ಮಾಡುತ್ತಿವೆ ಎಂದು ಗೊತ್ತಿದೆ. ಅವರೆಲ್ಲ ದುರುಪಯೋಗ ಮಾಡಿಲ್ಲ ಎಂದು ಕಂಡು ಬಂದಿದೆ. ಒಂದು ವೇಳೆ ದುರುಪಯೋಗ ಮಾಡಿದ್ದರೆ ಅಂಥವರಿಗೆ ಮುಂದಿನ ಕೋಟಾ ಸಿಕ್ಕುತ್ತಿರಲಿಲ್ಲ.

Teachers working in the DistrictSc hool Board, Dharwar.

*Q.—55. Sri SIDDAIAH KASHIMATH (Shirahatti).—

Will the Government be pleased to state :—

(*a*) the number of Primary School teachers (male and female) that are working in the District School Board, Dharwar ;

(*b*) the number of school-going children in the above district mainly to the District School Board Primary Schools ;

(*c*) whether the present teaching staff is adequate to teach the students in the said District School Board Schools ?

A.—Sri S. R. KANTHI (Minister for Education).—

(*a*) *Primary School Teachers* :

Males.	*Femles.*
5,050	635.

(*b*) 2,56,788

(*c*) Yes.

ಶ್ರೀ ಸಿದ್ದಯ್ಯ ಕಾಶಿಮಠ್.—ಮಂಡಲಯ ಶಾಲೆಗಳಲ್ಲರುವ ವಿಧ್ಯಾರ್ಥಿಗಳಿಗೆ ಬೋಧಿಸಲು ಸಾಕಷ್ಟು ಶಿಕ್ಷಕರಿದ್ದಾರೆ ಎಂದು ಹೇಳಿದ್ದಾರೆ. ಆದರೆ ಸರ್ಕಾರದ ಲೆಕ್ಕದ ಪ್ರಕಾರ ಒಂದು ಸಾವಿರ ಶಿಕ್ಷಕರ ಕೊರತೆ ಇದೆ. ಆ ಕೊರತೆಯನ್ನು ತುಂಬುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ?

†ಶ್ರೀ ಎಸ್. ಆರ್. ಕಂಠಿ.—ಈ ತರಹ ಪರಿಸ್ಥಿತಿ ಎಲ್ಲ ಕಡೆಗೂ ಇದೆ. ಧಾರವಾಡ ಜಿಲ್ಲೆಯಲ್ಲ ಶಿಕ್ಷಕರ ಕೊರತೆ ಏನು ಇದೆ ೯ಂದು ಮಾನ್ಯ ಸದಸ್ಯರು ಹೇಳುತ್ತಾರೆಯೋ ಅದು ಅಷ್ಟು ಜಾಸ್ತಿ ಅಲ್ಲ. 6,420 ಶಿಕ್ಷಕರು ಇರಬೇಕಾಗಿದ್ದು ಅದರಲ್ಲಿ 5,685 ಮಂದಿ ಮಾತ್ರ ಇದ್ದಾರೆ. ಈ ಪರಿಸ್ಥಿತಿ ಎಲ್ಲ ಜಿಲ್ಲೆಗಳಲ್ಲಿಯೂ ಇದೆ. ವಿದ್ಯಾರ್ಥಿ ಶಿಕ್ಷಕರ ಪ್ರಮಾಣ 1:45 ಬರುತ್ತದೆ. ಇದು ಅಷ್ಟೇನೂ ಅಷ್ಟೇ ಪಣ ತೆಗೆದುಕೊಳ್ಳುವಂಥದ್ದಲ್ಲ.